# ನಿವೇದನೆ

## ಶಾಲೆಗಳು ಮನುಷ್ಯಧರ್ಮದ ಕೇಂದ್ರಗಳಾದಾಗ ಬದುಕು ಒಡ್ಡುವ ಪರೀಕ್ಷೆಗಳಲ್ಲೂ ಮಕ್ಕಳಿಗೆ ಜಯ

**ಶಿಕ್ಷಣ ಹಾಗೂ ಪರೀಕ್ಷೆಗಳು ಮಕ್ಕಳ ಮನೋವಿಕಾಸದಿಂದ ದೂರವಾಗಿ, ವಾಣಿಜ್ಯಾತ್ಮಕ ಆಯಾಮ ಪಡೆದುಕೊಂಡಿರುವ ಸಂದರ್ಭದಲ್ಲಿ, ಪ್ರತಿಕೂಲ ಸನ್ನಿವೇಶದಲ್ಲೂ ಅತ್ಯುತ್ತಮ ಸಾಧನೆ ಮಾಡುವ ವಿದ್ಯಾರ್ಥಿಗಳ ಕಥನಗಳು ಶಿಕ್ಷಣದ ಮೂಲಭೂತ ಆಶಯಗಳನ್ನು ಜೀವಂತವಾಗಿಡುವ ವಿರಳ ಉದಾಹರಣೆಗಳಂತೆ ಕಾಣಿಸುತ್ತವೆ.**



ಈಶ್ವರ್

ಕರ್ನಾಟಕ ಮತ್ತು ಆಂಧ್ರಪ್ರದೇಶದ ಇಬ್ಬರು ಬಾಲಕಿಯರ ಶೈಕ್ಷಣಿಕ ಸಾಧನೆ ದೇಶದ ಗಮನಸೆಳೆಯುವಂತಿದೆ ಹಾಗೂ ಹೆಣ್ಣುಮಕ್ಕಳ ಶಿಕ್ಷಣಕ್ಕಿಂತಲೂ ಮದುವೆಗೆ ಆದ್ಯತೆ ನೀಡುವ ಪೋಷಕರಿಗೆ ಪಾಠದಂತಿದೆ. ಬೆಳಗಾವಿ ಜಿಲ್ಲೆಯ ರಾಯಬಾಗದ ವಿದ್ಯಾರ್ಥಿನಿ ಓದಿನಲ್ಲಿ ಬಲು ಜಾಣೆ. ಹತ್ತನೇ ತರಗತಿಯಲ್ಲಿ ಶೇ. 98.4 ಅಂಕ ಪಡೆದಿರುವ ಈ ಜಾಣೆ, ಪ್ರಥಮ ಪಿಯುಸಿಯಲ್ಲಿದ್ದಾಗ ಪೋಷಕರ ಒತ್ತಡದಿಂದ ಬಾಲ್ಯವಿವಾಹಕ್ಕೆ ಕೊರಳೊಡ್ಡಬೇಕಾಯಿತು. ಮದುವೆಯಾದರೂ ಓದುವ ಕನಸು ಬಿಟ್ಟುಕೊಡದ ಬಾಲಕಿ, 'ಮಕ್ಕಳ ಸಹಾಯವಾಣಿ'ಯ ನೆರವು ಪಡೆದು ಸವದತ್ತಿಯ ಬಾಲಕಿಯರ ಸರ್ಕಾರಿ ಬಾಲಮಂದಿರದಲ್ಲಿ ಪ್ರವೇಶ ಪಡೆದಿದ್ದಾಳೆ. ರಾಯಬಾಗದ ಕಾಲೇಜಿನಲ್ಲಿ ಖಾಸಗಿ ಅಭ್ಯರ್ಥಿಯಾಗಿ ಪರೀಕ್ಷೆ ಬರೆದು, ಪಿಯುಸಿ ದ್ವಿತೀಯ ವರ್ಷದ ಕಲಾ ವಿಭಾಗದ ಪರೀಕ್ಷೆಯಲ್ಲಿ ಶೇ. 94.6 ಅಂಕ ಪಡೆದಿದ್ದಾಳೆ. ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ವಿದ್ಯಾರ್ಥಿನಿಯ ಕಥೆಯೇನೂ ಭಿನ್ನವಲ್ಲ. ಮೊದಲ ವರ್ಷದ 'ಇಂಟರ್‌ಮೀಡಿಯೆಟ್ ಬೋರ್ಡ್ ಪರೀಕ್ಷೆ'ಯಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣಳಾಗಿರುವ ಈ ವಿದ್ಯಾರ್ಥಿನಿ, ಮನೆಯವರು ಮಾಡಲು ಹೊರಟಿದ್ದ ಬಾಲ್ಯವಿವಾಹದ ವಿರುದ್ಧ ದನಿಯೆತ್ತಿದ ಗಟ್ಟಿಗಿತ್ತಿ. ಜಿಲ್ಲಾಡಳಿತದಿಂದ ರಕ್ಷಣೆ ಪಡೆದು ವಿದ್ಯಾಭ್ಯಾಸ ಮುಂದುವರೆಸಿದ್ದಾಳೆ. ಬಾಲ್ಯವಿವಾಹದ ವಿರುದ್ಧ ಧ್ವನಿಯೆತ್ತಿ ಓದು ಮುಂದುವರೆಸಿರುವ ಈ ಇಬ್ಬರೂ ಹೆಣ್ಣುಮಕ್ಕಳಿಗೆ ಐಎಎಸ್ ಅಧಿಕಾರಿಯಾಗುವ ಆಸೆ; ಬಾಲ್ಯವಿವಾಹದ ವಿರುದ್ಧ ಜಾಗೃತಿ ಮೂಡಿಸಿ, ಹೆಣ್ಣುಮಕ್ಕಳ ಶಿಕ್ಷಣ ಮುಂದುವರೆಸುವುದಕ್ಕೆ ಒತ್ತಾಸೆಯಾಗುವ ಕನಸು.

ವಿದ್ಯಾರ್ಥಿ ಜೀವನದ ನಿರ್ಣಾಯಕ ಪರೀಕ್ಷೆಗಳಲ್ಲಿ ಮಕ್ಕಳು ಗಳಿಸುವ ಯಶಸ್ಸು ಪೋಷಕರ ಹೆಮ್ಮೆಗೆ ಮಾತ್ರವಲ್ಲ, ಸಮಾಜದ ಅಭಿನಂದನೆಗೂ ಅರ್ಹವಾದುದು. ಆದರೆ, ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿ ಪರೀಕ್ಷೆಗಳಲ್ಲಿ ಯಶಸ್ಸು ಗಳಿಸುವ ವಿದ್ಯಾರ್ಥಿಗಳ ಯಶಸ್ಸಿಗೆ ವಿಶೇಷ ಮಹತ್ವವಿದೆ. ಸಾಮಾಜಿಕವಾಗಿ ದುರ್ಬಲ ವರ್ಗಗಳಿಂದ ಬಂದ ಮಕ್ಕಳ ಸಾಧನೆ, ವೈಯಕ್ತಿಕ ಯಶಸ್ಸಷ್ಟೇ ಆಗಿರದೆ, ಅವರು ಪ್ರತಿನಿಧಿಸುವ ಸಮುದಾಯಕ್ಕೆ ಆತ್ಮವಿಶ್ವಾಸ ಕಲ್ಪಿಸಿಕೊಡುವ ಸಂಕೇತವೂ ಆಗಿರುತ್ತದೆ. ದುರ್ಬಲ ಸಮುದಾಯಗಳು, ಕೂಲಿಕಾರ್ಮಿಕರು ಹಾಗೂ ಒಂಟಿ ಪೋಷಕರ ಮಕ್ಕಳ ಯಶಸ್ಸು ಸುಲಭ ಲೆಕ್ಕಾಚಾರಕ್ಕೆ ಸಿಲುಕುವಂತಹದ್ದಲ್ಲ. ಶಿಕ್ಷಣ ಹಾಗೂ ಪರೀಕ್ಷೆಗಳು ಮಕ್ಕಳ ಮನೋವಿಕಾಸದಿಂದ ದೂರವಾಗಿ, ವಾಣಿಜ್ಯಾತ್ಮಕ ಆಯಾಮ ಪಡೆದುಕೊಂಡಿರುವ ಸಂದರ್ಭದಲ್ಲಿ, ಪ್ರತಿಕೂಲ ಸನ್ನಿವೇಶದಲ್ಲೂ ಅತ್ಯುತ್ತಮ ಸಾಧನೆ ಮಾಡುವ ವಿದ್ಯಾರ್ಥಿಗಳ ಕಥನಗಳು ಶಿಕ್ಷಣದ ಮೂಲಭೂತ ಆಶಯಗಳನ್ನು ಜೀವಂತವಾಗಿಡುವ ವಿರಳ ಉದಾಹರಣೆಗಳಂತೆ ಕಾಣಿಸುತ್ತವೆ.

ಶಿಕ್ಷಣದ ಯಶಸ್ಸಿನ ಸಂಕಥನಗಳ ಬಗ್ಗೆ ಮಾತನಾಡುವಾಗ ದಾವಣಗೆರೆಯ ನಿಟುವಳ್ಳಿ ಶಾಲೆಯ ಘಟನೆಯನ್ನು ನೆನಪಿಸಿಕೊಳ್ಳಬೇಕು. ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿಯೊಬ್ಬಳು ಕ್ಯಾನ್ಸರ್ ಬಾಧೆಗೊಳಗಾಗಿ ಬದುಕುವ ಆಸೆಯನ್ನೇ ಕಳೆದುಕೊಂಡು, ಶಾಲೆಯ ಶಿಕ್ಷಕರು ತೋರಿದ ಕಳಕಳಿಯಿಂದ ಮರುಹುಟ್ಟು ಪಡೆದಿರುವ ಪ್ರಸಂಗವಿದು. ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ವಿದ್ಯಾರ್ಥಿನಿಯ ಚಿಕಿತ್ಸೆಗೆ 12 ಲಕ್ಷ ರೂಪಾಯಿ ಹೊಂದಿಸುವುದು ಸಾಧ್ಯವಾಗದೆ, ಗಾರೆ–ಮನೆಗೆಲಸ ಮಾಡುತ್ತಿದ್ದ ಬಾಲಕಿಯ ಪೋಷಕರು ಕೈಚೆಲ್ಲಿದ್ದರು. ವಿಷಯ ತಿಳಿದ ಶಾಲೆಯ ಕೆ.ಟಿ. ಜಯಪ್ಪ ಎನ್ನುವ ಶಿಕ್ಷಕರು ಬಡ ವಿದ್ಯಾರ್ಥಿನಿಯ ನೆರವಿಗೆ ನಿಂತು, ಸಹ ಶಿಕ್ಷಕರು ಹಾಗೂ ದಾನಿಗಳಿಂದ ಹಣ ಸಂಗ್ರಹಿಸಿಕೊಟ್ಟಿದ್ದಾರೆ. ಮಂಗಳೂರಿನ ಜುಲೇಖಾ ಯೆನೆಪೋಯ ಆಸ್ಪತ್ರೆ ಕೂಡ ಬಾಲಕಿಯ ಚಿಕಿತ್ಸೆಗೆ ಹೃದಯವಂತಿಕೆಯಿಂದ ಸ್ಪಂದಿಸಿದೆ. ಬಾಲಕಿ ಈಗ ಸಂಪೂರ್ಣ ಗುಣಮುಖಳಾಗಿದ್ದು, ವಿದ್ಯಾಭ್ಯಾಸ ಮುಂದುವರೆಸುವ ಉತ್ಸಾಹದಲ್ಲಿದ್ದಾಳೆ. ವಿದ್ಯಾರ್ಥಿನಿಯ ಬೆನ್ನಿಗೆ ನಿಂತ ನಿಟುವಳ್ಳಿ ಶಾಲೆಯ ಶಿಕ್ಷಕವರ್ಗ, ಶಿಕ್ಷಣದ ಮೂಲಸ್ರೋತವಾದ ಮಾನವಧರ್ಮವನ್ನು ನೆನಪಿಸುವ ಅಭಿನಂದನಾರ್ಹ ಕೆಲಸ ಮಾಡಿದೆ.

ಪ್ರಸಕ್ತ ಸಂದರ್ಭದಲ್ಲಿ, ಅಂಕಗಳನ್ನು ಗಳಿಸುವ ಪರೀಕ್ಷೆಗಳನ್ನು ಶೈಕ್ಷಣಿಕ ಮಾನದಂಡವಾಗಿ ಪರಿಗಣಿಸಲಾಗುತ್ತಿದೆ. ಅಂಕಗಳ ಪರೀಕ್ಷೆಗೆ ಮಕ್ಕಳನ್ನು ಸಜ್ಜುಗೊಳಿಸುವುದು ಶಾಲಾಕಾಲೇಜುಗಳ ಗುರಿ ಎನ್ನುವಂತಾಗಿದೆ. ಈ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕೇಂದ್ರವಾಗಿಟ್ಟುಕೊಂಡು ಟ್ಯೂಷನ್ ಸೆಂಟರ್‌ಗಳು ನಾಯಿಕೊಡೆಯಂತೆ ತಲೆಯೆತ್ತಿವೆ. ಇವೆಲ್ಲವನ್ನೂ ನಿರಾಕರಿಸಲಾಗದ ಹಂತಕ್ಕೆ ಪ್ರಸಕ್ತ ಶೈಕ್ಷಣಿಕ ವ್ಯವಸ್ಥೆ ತಲುಪಿದೆ. ಈ ಅಂಕಕೇಂದ್ರಿತ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳು ಬದುಕಿನ ನೈಜ ಸವಾಲು–ಪರೀಕ್ಷೆಗಳನ್ನು ಎದುರಿಸಲು ಸಜ್ಜುಗೊಳ್ಳುವುದಕ್ಕೆ ಅವಕಾಶ ತೀರಾ ಕಡಿಮೆ. ಇಂಥ ನಿರಾಶಾದಾಯಕ ಪರಿಸ್ಥಿತಿಯಲ್ಲಿ ಓದಿನ ಮೂಲಕ ಸಾಮಾಜಿಕ ಬದಲಾವಣೆಗೆ ಹಂಬಲಿಸುವ ಮಕ್ಕಳ ಯಶಸ್ಸಿನ ಕಥನಗಳು ಆಶಾಕಿರಣದಂತೆ ಕಾಣಿಸುತ್ತವೆ. ಶಾಲಾ ಪರೀಕ್ಷೆಗಿಂತಲೂ ಬದುಕಿನ ಪರೀಕ್ಷೆಯೇ ಮುಖ್ಯವಾದುದು ಎನ್ನುವುದನ್ನು ಕೆಲವರಾದರೂ ಶಿಕ್ಷಕರು ತಮ್ಮ ನಡವಳಿಕೆಯ ಮೂಲಕ ತೋರಿಸುತ್ತಿದ್ದಾರೆ. ಇಂಥ ಮಾನವೀಯ ನಡವಳಿಕೆಗಳು ಸರ್ಕಾರಿ ಶಾಲೆಗಳಲ್ಲಿಯೇ ಹೆಚ್ಚು ಎನ್ನುವುದೂ ಗಮನಾರ್ಹ. ಆರೋಗ್ಯಕರ ಸಮಾಜವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುವ ಮೌಲಿಕ ನಡವಳಿಕೆಗಳು ಸಮಾಜದ ಮೆಚ್ಚುಗೆ ಮತ್ತು ಕೃತಜ್ಞತೆಗೆ ಅರ್ಹವಾಗಿವೆ.

**■ ರಘುನಾಥ ಚ.ಹ.**